'ನಿಮ್ಮ ಪತ್ರ ತಲುಪಿತು. ಶಿವಮೊಗ್ಗೆಗೆ ಬರುವವನಿದ್ದೆ. ಖುದ್ದಾಗಿ ನೋಡಿ ಹೋಗೋಣವೆಂದು ಪತ್ರ ಬರೆಯಲಿಲ್ಲ.'

'ನಾಡಕರ್ಣಿಯವರೆ...' ವಿಶಿಷ್ಟ ವಸ್ತುವೊಂದು ಸಿಕ್ಕಿದಷ್ಟು ಸಂತೋಷವಾಗಿತ್ತು ನನಗೆ. ಅವನು ನಿರ್ಲಿಪ್ತನಂತಿದ್ದ.

'ಅವನು ಹೀಗೆ ಸಾಯುತ್ತಾನೆಂದು ನಾನೆಣಿಸಿರಲಿಲ್ಲ. ಅವನನ್ನು ನೋಡಿ ಬಹಳ ದಿನವಾಯಿತು... ಸುಮಾರು ಎರಡು ವರುಷದ ಮೇಲಾಯಿತು. ಅವನೇ ಗೋವೆಗೆ ಒಮ್ಮೆ ಬಂದಿದ್ದ... ಆಮೇಲೆ ಒಂದೆರಡು ಕಾಗದಗಳನ್ನು ಬರೆದಿದ್ದ.'

'ಅವರು ನಿಮಗೆ ಸ್ನೇಹಿತರಾದದ್ದು?'

'ಭದ್ರಾವತಿಯಲ್ಲಿ ಇಬ್ಬರೂ ಎರಡು ವರುಷ ಜತೆಯಲ್ಲಿದ್ದೆವು. ಒಂದೇ ಬ್ಯಾಂಕು.'

'ಅವರ ತಂದೆ–ತಾಯಿಗಳ ಬಗ್ಗೆ... ಊರಿನ ಬಗ್ಗೆ, ಸಂಬಂಧಿಕರ ಬಗ್ಗೆ ಏನಾದರೂ ನಿಮಗೆ ಗೊತ್ತೆ?' ನನ್ನ ಕುತೂಹಲವನ್ನು ತಡೆಯಲೆತ್ನಿಸಿ ಸೋತು ಕೇಳಿದ್ದೆ.

'ಭದ್ರಾವತಿಯಿಂದ ಹದಿನೈದು ಮೈಲಿ ದೂರದ ಅವರ ಊರಿಗೆ ಒಮ್ಮೆ ಕರೆದುಕೊಂಡು ಹೋಗಿದ್ದ. ತಂದೆ–ತಾಯಿ, ಒಬ್ಬಳು ತಂಗಿ... ಮನೆಯಲ್ಲಿ ಅವನ ಸಂಬಂಧಿಕರ್‍ಯಾರೂ ನನಗೆ ಪರಿಚಯವಿಲ್ಲ.'

'ನನ್ನ ಬಳಿ ಯಾರೂ ಇಲ್ಲವೆಂದು ಹೇಳಿದ್ದರಲ್ಲ?' ಆಶ್ಚರ್ಯದಿಂದಲೇ ಕೇಳಿದ್ದೆ.

'ಈ ಎಂಟು ವರ್ಷಗಳ ಹಿಂದೆ ನಾನು ಹೋಗಿದ್ದದ್ದು... ಆ ನಂತರ ಅವರ ಬಗ್ಗೆ ನನಗೇನೂ ಅವನು ಹೇಳಿರಲಿಲ್ಲ.'

'ಊರಿನ ಅಡ್ರಸ್ಸು ಗೊತ್ತಿದೆಯೆ?' ಅವನು ಜ್ಞಾಪಿಸಿಕೊಂಡು ತಡವುತ್ತಾ ಅಡ್ರಸ್ಸು ಹೇಳಿದ.

'ಅವನ ಆತ್ಮೀಯ ಸ್ನೇಹಿತರು ಬೇರೆ ಯಾರಾದರೂ ಇದ್ದಾರೆಯೇ?'

'ನನಗೆ ತಿಳಿದ ಮಟ್ಟಿಗೆ ಯಾರೂ ಇಲ್ಲ. ಒಂದು ರೀತಿಯ ಥ್ರಿಲ್ ತರಿಸುತ್ತಿದ್ದ ಮನುಷ್ಯ ಅವ, ಏನೆಲ್ಲ ಇದ್ದರೂ ಇರದವನಂತೆ ವರ್ತಿಸುತ್ತಿದ್ದ.'

'ಕುಮುದ ಅಂತ ನಿಮಗೇನಾದ್ರೂ ಗೊತ್ತೆ?' ನನ್ನ ಹಠಾತ್ ಪ್ರಶ್ನೆಗೆ ಅವನು ಸ್ವಲ್ಪ ಹೊತ್ತು ಜ್ಞಾಪಿಸಿಕೊಳ್ಳತೊಡಗಿದ.

'ಆಂ... ಭದ್ರಾವತಿಯಲ್ಲಿದ್ದಾಗ ಒಮ್ಮೆ ಹೇಳಿದ್ದ. ಸೈಂಟ್ ಮೇರಿ ಮಿಡಲ್ ಸ್ಕೂಲಿನಲ್ಲಿ ಕನ್ನಡ ಟೀಚರ್ ಆಗಿದ್ದಾರೆ ಎಂದು ಹೇಳಿದ ನೆನಪು. ನನಗೂ ಆಕೆಯನ್ನು ತೋರಿಸುತ್ತೇನೆಂದು ಹೇಳಿದ್ದ. ಆದರೆ ನಂತರ ಆ ವಿಷಯ ಕೂಡ ಪ್ರಸ್ತಾಪಿಸಿರಲಿಲ್ಲ. ಆ ಬಗ್ಗೆ ಕುತೂಹಲದಿಂದ ಮತ್ತೆ ಮತ್ತೆ ಕೇಳಿದ್ದೆ, ಆದರೆ ಅವನೇನೂ ಹೇಳಿರಲಿಲ್ಲ. ಅಷ್ಟರಲ್ಲಿ ಅವನಿಗೆ ಇಲ್ಲಿಗೂ, ನನಗೆ ಮರ್ಮಗೋವಾಕ್ಕೂ ವರ್ಗವಾಯಿತು' ಏನನ್ನೂ ಬಚ್ಚಿಟ್ಟುಕೊಳ್ಳದವನಂತೆ ಹೇಳುತ್ತಿದ್ದ.

'ಅವನು ತನ್ನ ಮನೆಯನ್ನು ಕುಮುದ ಹೆಸರಿಗೆ ಬರೆದಿದ್ದಾನೆ' ನಾನು ಹೀಗೆ ಹೇಳಿದ ತಕ್ಷಣ ಅವನು ಆಶ್ಚರ್ಯದಿಂದ ಮುಖ ಅರಳಿಸಿದ್ದ.

ನಾಡಕರ್ಣಿ ಸಾಯಂಕಾಲದವರೆಗೂ ಇದ್ದ. ಊಟ ಮಾಡಿಕೊಂಡು ಚಾ ಕುಡಿದು ಸಾಯಂಕಾಲದ ಬಸ್ಸಿಗೆ ಹೊರಟ. ದಿವಾಕರನ ಸಾವಿನಿಂದ ತೀವ್ರ ಅಸಮಾಧಾನ ಮತ್ತು ದುಃಖ ಅವನಿಗೂ ಆಗಿದೆಯೆಂದು ಅವನ ಮಾತುಗಳ ಮೂಲಕ ವ್ಯಕ್ತವಾಗುತ್ತಿತ್ತು. 'ಅಪರೂಪದ ಮನುಷ್ಯ ಸಾರ್ ಅವ. ಭದ್ರಾವತಿಯಲ್ಲಿದ್ದಾಗ ನನಗಾಗಿ ತುಂಬಾ ಖರ್ಚು ಮಾಡುತ್ತಿದ್ದ. ನಮ್ಮದು ದೊಡ್ಡ ಸಂಸಾರ... ತುಂಬಾ ತಾಪತ್ರಯ ಇತ್ತು ಆಗ. ಗೋವೆಗೆ ಬಂದಿದ್ದಾಗಲೂ